**69 ನೇ ಹೆಚ್ಚುವರಿ ನಗರ ಸಿವಿಲ್ ಮತ್ತು ಸತ್ರ ನ್ಯಾಯಾಧೀಶರ,**
**ನ್ಯಾಯಾಂಗಣ (70), ಬೆಂಗಳೂರು**
**ಎಸ್.ಸಿ.ನಂ. 1314/14**

ಸಾಕ್ಷಿಗೆ ಪ್ರಮಾಣ ವಚನಃ ಭೋದಿಸಲಾಗಿದೆ.
ದಿನಾಂಕ:02/04/2019

ಪಿಡಬ್ಲ್ಯೂಃ 9
ಸಿಡಬ್ಲ್ಯೂಃ 6

| | | |
|---|---|---|
| ಹೆಸರು | ಃ | ಸಿದ್ದರಾಜು |
| ತಂದೆಯ ಹೆಸರು | ಃ | ಪುಟ್ಟಸುಬ್ಬೇಗೌಡ |
| ವಯಸ್ಸು | ಃ | 32ವರ್ಷಗಳು |
| ಉದ್ಯೋಗ | ಃ | ಚಾಲಕ |
| ವಿಳಾಸ | ಃ | ಬನಶಂಕರಿ, ಕಾವೇರಿನಗರ, ಬೆಂಗಳೂರು. |

**ಮುಖ್ಯ ವಿಚಾರಣೆ ಮಾನ್ಯ ಪ್ರಭಾರ ಸರ್ಕಾರಿ ಅಭಿಯೋಜಕರಿಂದಃ**

ಈಗ ನೋಡಿದ ದಾಖಲೆಯಲ್ಲಿ ನನ್ನ ಸಹಿ ಇದೆ. ಸದರಿ ದಾಖಲೆ ಪಂಚನಾಮೆಯಾಗಿದ್ದು ಅದನ್ನು ಈಗಾಗಲೇ ನಿ.ಪಿ.22 ಎಂದು ಗುರುತಿಸಿದ್ದು, ಸಾಕ್ಷಿಯ ಸಹಿಯನ್ನು ನಿ.ಪಿ.22(ಬಿ) ಎಂದು ಗುರುತಿಸಲಾಯಿತು. ಸದರಿ ದಾಖಲೆಗೆ ಠಾಣೆಯಲ್ಲಿ ಸಹಿ ಮಾಡಿದ್ದು, ಅದರಲ್ಲಿ ಬರೆದಿರುವ ವಿಚಾರ ನನಗೆ ತಿಳಿದಿಲ್ಲ. ನ್ಯಾಯಾಲಯದ ಮುಂದಿರುವ ಆರೋಪಿಗಳನ್ನು ನೋಡಿ ಗುರುತಿಸಿರುವುದಿಲ್ಲ. ನನ್ನ ಸಮಕ್ಷಮ ಯಾವುದೇ ವಸ್ತುಗಳನ್ನು ಜಪ್ತುಪಡಿಸಿಲ್ಲ. ಸಾಕ್ಷಿ ನ್ಯಾಯಾಲಯದ ಮುಂದೆ ಹಾಜರುಪಡಿಸಿರುವ ಮಚ್ಚಿನ ಮೇಲೆ ಅಂಟಿಸಿರುವ ಚೀಟಿಯಲ್ಲಿರುವ ಸಹಿಯನ್ನು

ನೋಡಿ ಗುರುತಿಸಿದ್ದು, ಸಹಿಯನ್ನು ಮು.ಮಾ.1(ಬಿ) ಎಂದು ಗುರುತಿಸಲಾಯಿತು. ಸಾಕ್ಷಿ ಸದರಿ ಮಚ್ಚನ್ನು ಠಾಣೆಯಲ್ಲಿ ನೋಡಿರುವುದಾಗಿ ನುಡಿಯುತ್ತಾರೆ. ಸಾಕ್ಷಿ ನಿ.ಪಿ.9ರ ಫೋಟೋದಲ್ಲಿ ಕಾಣುವ ಹಣವನ್ನು ನೋಡಿ ಗುರುತಿಸುವುದಿಲ್ಲ.

(ಈ ಹಂತದಲ್ಲಿ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿಯಾಗಿ ಪರಿಗಣಿಸಬೇಕೆಂದು ಸಾರ್ವಜನಿಕ ಅಭಿಯೋಜಕರು ಅನುಮತಿಯನ್ನು ಕೋರಿದರು. ದಾಖಲೆಗಳನ್ನು ಪರಿಶೀಲಿಸಿ ಅನುಮತಿ ನೀಡಲಾಯಿತು.)

**ಪಾಟೀ ಸವಾಲುಃ ಸಾರ್ವಜನಿಕ ಅಭಿಯೋಜಕರಿಂದಃ**

ದಿ.23.06.2014ರಂದು ಪೊಲೀಸರು ನನ್ನನ್ನು ಹಾಗೂ ಬ್ಯಾಟರಾಜ ಎಂಬುವನನ್ನು ಕರೆಯಿಸಿ, ತಮ್ಮ ವಶದಲ್ಲಿದ್ದ ನ್ಯಾಯಾಲಯದ ಮುಂದಿರುವ ಇಬ್ಬರು ಆರೋಪಿಗಳು ಹಾಗೂ ಮತ್ತೊಬ್ಬ ಆರೋಪಿಯನ್ನು ತೋರಿಸಿ ಸದರಿಯವರು ದಿ.20.06.2014ರಂದು ರಾತ್ರಿ 11.30ರಲ್ಲಿ ಈ ಪ್ರಕರಣದ ಪ್ರಾಸಾ3ರವರನ್ನು ಆಟೋದಲ್ಲಿ ಅಪಹರಿಸಿ, ಮಚ್ಚನ್ನು ತೋರಿಸಿ, ಹೆದರಿಸಿ, ಆತನಿಂದ ಅವರುಗಳು ಡೆಬಿಟ್‌ಕಾರ್ಡ್ ಹಾಗೂ ಚೆಕ್‌ಗಳನ್ನು ಕಿತ್ತುಕೊಂಡು ಎಟಿಎಂನಲ್ಲಿ ರೂ.23000ಹಣವನ್ನು ಡ್ರಾಮಾಡಿ, ಹಾಗೂ ಚೆಕ್‌ಗೆ ಸಹಿಪಡೆದುಕೊಂಡು ಬ್ಯಾಂಕ್‌ನಲ್ಲಿ ರೂ.2,55,000ಹಣವನ್ನು ಡ್ರಾಮಾಡಿಕೊಂಡಿದ್ದು, ಕೃತ್ಯಕ್ಕೆ ಬಳಸಿದ ಮಚ್ಚನ್ನು, ಡ್ರಾಮಾಡಿದ ಹಣವನ್ನು ಇಟ್ಟಿರುವ ಸ್ಥಳವನ್ನು ತೋರಿಸಿ ಹಾಜರುಪಡಿಸುವುದಾಗಿ ಹೇಳಿಕೆ ನೀಡಿದ್ದು, ಆ ಸಂದರ್ಭದಲ್ಲಿ ನೀವು ಪಂಚರಾಗಿ ಇರಬೇಕೆಂದು ಕೇಳಿಕೊಂಡಿದ್ದು, ಅದರಂತೆ ನಾವು ಒಪ್ಪಿದ್ದು, ನಂತರ ಆರೋಪಿಗಳು, ನಿಮ್ಮಗಳನ್ನು ಅವರು ವಾಸವಿರುವ ಮನೆಯ ಬಳಿ ಕರೆದುಕೊಂಡು ಹೋಗಿ ದಾವುದ್‌ಖಾನ್‌ನನು ಸೂಟ್‌ಕೇಸ್‌ನಿಂದ ಹಣವನ್ನು ತೆಗೆದು

ಹಾಜರುಪಡಿಸಿದ್ದು ಎಣಿಕೆ ಮಾಡಿ ನೋಡಲಾಗಿ ರೂ.269000 ಇದ್ದು ಎಲ್ಲಾ ನೋಟುಗಳು 500ರೂ ಮುಖಬೆಲೆಯ ನೋಟುಗಳಾಗಿದ್ದು ನಂತರ ಮನೆಯಿಂದ ಒಂದು ಮಚ್ಚನ್ನು ತಂದು ಹಾಜರುಪಡಿಸಿದ್ದು ಅವುಗಳನ್ನು ಮುಂದಿನ ಕ್ರಮಕ್ಕಾಗಿ ನಿ.ಪಿ.22 ಪಂಚನಾಮೆ ಮೂಲಕ ಜಪ್ತುಪಡಿಸಿಕೊಂಡರು ಎಂದರೆ ಸರಿಯಲ್ಲ. ಈ ಬಗ್ಗೆ ಈಗ ಓದಿ ಹೇಳಿದಂತೆ ಹೇಳಿಕೆ ನೀಡಿದ್ದೇನೆ ಎಂದರೆ ಸರಿಯಲ್ಲ, ಹೇಳಿಕೆಯ ಸದರಿ ಭಾಗವನ್ನು ನಿ.ಪಿ.31 ಎಂದು ಗುರುತಿಸಲಾಯಿತು. ನ್ಯಾಯಾಲಯದ ಮುಂದಿರುವ ಮಚ್ಚು ಹಾಗೂ ನಿ.ಪಿ.9ರ ಫೋಟೋದಲ್ಲಿರುವ ಹಣವನ್ನು ಪೊಲೀಸರಿಗೆ ನ್ಯಾಯಾಲಯದ ಮುಂದಿರುವ ಆರೋಪಿಗಳು ಹಾಜರುಪಡಿಸಿದ ಮೇರೆಗೆ ಜಪ್ತುಪಡಿಸಿದ್ದರು ಎಂದರೆ ಸರಿಯಲ್ಲ. ಎಲ್ಲಾ ವಿಚಾರಗಳು ಗೊತ್ತಿದ್ದರೂ ಆರೋಪಿಗಳಿಗೆ ಸಹಾಯ ಮಾಡಲು ಸುಳ್ಳು ಸಾಕ್ಷ್ಯ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ಪಾಟೀ ಸವಾಲು ಆರೋಪಿತರ ಪರವಾಗಿ ಶ್ರೀಟಿ.ಸಿ ವಕೀಲರಿಂದಃ**

ಮು.ಮಾ.1ರ ಮೇಲೆ ಅಂಟಿಸಿರುವ ಚೀಟಿಗೆ ಪಡೆದಿರುವ ಸಹಿಯನ್ನು ಖಾಲಿ ಹಾಳೆಗೆ ಪಡೆದುಕೊಂಡಿದ್ದರು ಎಂದರೆ ಸರಿ.

**ಮರುವಿಚಾರಣೆಃ** ಇಲ್ಲ.

(ಬಹಿರಂಗ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಗಣಕೀಕರಿಸಲಾಗಿದೆ.)

ಓ.ಹೇ.ಕೇ.ಸ.ಇದೆ

**( ಟಿ.ಪಿ.ರಾಮಲಿಂಗೇಗೌಡ)**
**69ನೇ ಅಪರ ನಗರ ಸಿವಿಲ್**
**ಮತ್ತು ಸತ್ರ ನ್ಯಾಯಾಧೀಶರು, ಬೆಂಗಳೂರು.**